# ಆನ್‌ಲೈನ್ ಕಾರ್ಯಾಗಾರ

ಬೆಂಗಳೂರು: ಸಿಎಂಆರ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಮ್ಯಾನೇಜ್ಮೆಂಟ್ ನೇತೃತ್ವದಲ್ಲಿ ಇದೇ ಸೆ.17ರಂದು ಸಿಎಕ್ಸ್‌ಓ (ಚೀಫ್ ಎಕ್ಸಪಿರಿಯನ್ಸ್ ಆಫೀಸರ್) ಕಾರ್ಯದಕ್ಷತೆ ಹೆಚ್ಚಿಸುವ ಉದ್ದೇಶದಿಂದ ವಿಶೇಷ ಆನ್‌ಲೈನ್ ಕಾರ್ಯಾಗಾರ ಆಯೋಜಿಸಲಾಗಿದೆ.

ಕೋವಿಡ್ ಕಾಲಘಟ್ಟದ ನಂತರ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಕಾರ್ಯದಕ್ಷತೆ, ವಹಿವಾಟು ವಿಸ್ತರಣೆ ಮಾಡಿಕೊಳ್ಳುವ ದೃಷ್ಟಿಯಿಂದ ಪರಿಣಿತ ಸಿಎಕ್ಸ್‌ಓಗಳ ನೇಮಕಾತಿಗೆ ಉತ್ಸುಕತೆ ತೋರಿವೆ, ಈ ಹಿನ್ನೆಲೆಯಲ್ಲಿ ಈ ಕಾರ್ಯಾಗಾರ ಆಯೋಜಿಸಲಾಗಿದೆ. ಹಲವಾರು ಖ್ಯಾತ ಉದ್ಯಮಿಗಳು ಆನ್‌ಲೈನ್‌ನಲ್ಲಿ ತಮ್ಮ ಅನುಭವವನ್ನು ಧಾರೆ ಎರೆಯಲಿದ್ದಾರೆ.